ರೀತಿಯಲ್ಲಿ ವಿತರಣೆ ಆಗತಕ್ಕ ವ್ಯವಸ್ಥೆ ಮಾಡಬೇಕು. ನಾನು ೨೦ ಅಂತಗಳ ಕಮಿಟಿಯಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡಿ ನನ್ನ ಅನುಭವಕ್ಕೆ ಬಂದಿದೆ. ಅನೇಕ ರೇಷನ್ ಡಿಪೋಗಳಲ್ಲಿ ಈ ರೀತಿ ನಡೆಯುತ್ತಿದೆ. ಇದು ಒಂದು ರೀತಿಯ ಹವ್ಯಾಸವಾಗಿಬಿಟ್ಟಿದೆ. ಇದನ್ನೆಲ್ಲ ನೋಡಿ ಸರಿಪಡಿಸುವ ಸಲುವಾಗಿ ಪೀಪಲ್ಸ್ ಕಮಿಟಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಪೀಪಲ್ಸ್ ಕಮಿಟಿ ಮಾಡಿ ಎಂದು ಏತಕ್ಕೆ ಹೇಳುತ್ತಿದ್ದೇನೆಂದರೆ ಆದಕ್ಕೆ ಕನ್‌ಸ್ಯೂಮರ್ಸ್ ಅನ್ನು ರೆಪ್ರಸೆಂಟೇಟೀವ್ಸ್ ಆಗಿ ತೆಗೆದುಕೊಳ್ಳಿ, ಬೇಡ ಎಂದು ಹೇಳುವುದಿಲ್ಲ. ಅವರಿಗೆ ಸೂಪರ್‌ವೈಸ್ ಮಾಡುವ ಅಧಿಕಾರ ಕೊಡಿ, ಆಡ್ವೈಸರಿ ಬಾಡಿ ಕೊಡಿ. ಒಟ್ಟಿನಲ್ಲಿ ಪೀಪಲ್ಸ್ ಕಮಿಟಿಗಳನ್ನು ಮಾಡುವುದು ಬಹಳ ಅಗತ್ಯವೆಂದು ಹೇಳುತ್ತೇನೆ. ದೊಡ್ಡ ನಗರ ಇದ್ದರೆ ಡಿವಿಜನಲ್ ಕಮಿಟಿ ಮಾಡಿ. ಅಲ್ಲಿ ಶಾಸಕರನ್ನು, ಅಧಿಕಾರಿಗಳನ್ನು ಹಾಕಿದರೆ ಸರಿಯಾದ ರೀತಿಯಲ್ಲಿ ವಿತರಣೆ ಮಾಡಿ ಇರುವ ಸಮಸ್ಯೆಗಳನ್ನು ಪರಿಹರಿಸಲು ಅನುಕೂಲವಾಗುತ್ತದೆ. ನನ್ನ ಸಲಹೆಯನ್ನು ಸರ್ಕಾರದವರು ಕೂಡಲೇ ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಖಂಡಿತ ಮಾಡುತ್ತೀರೆಂದು ನಂಬಿದ್ದೇನೆ. ಆ ರೀತಿ ಮಾಡಿ ಫುಡ್ ಕಾರ್ಪೊರೇಷನ್ ವಿಚಾರದಲ್ಲಿ ಸರಿಯಾದ ಕ್ರಮ ಕೈಗೊಳ್ಳಿ, ಇನ್ನು ಬಿಗಿಯಾದ ಕ್ರಮ ಕೈಗೊಳ್ಳಿ. ಇದರಿಂದ ರಾಜ್ಯದ ಜನರಿಗೆ ಅನೇಕ ವಿಚಾರಗಳಲ್ಲಿ ಅನುಕೂಲವಾಗುತ್ತದೆ.

೭–೫೦ ಪಿ. ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಿಮೆಂಟ್ ಡೀಕಂಟ್ರೋಲ್ ಆಗಿದೆ. ಬಂದಂಥ ಸಿಮೆಂಟ್‌ನ್ನು ಕೂಡ ಸರಿಯಾಗಿ ಹಂಚಿಕೆ ಮಾಡುವಂಥ ವ್ಯವಸ್ಥೆ ಕೂಡ ಇಲ್ಲ. ಪ್ರಿಯಾರಿಟಿ ಫಿಕ್ಸ್ ಮಾಡಿದ್ದೀರಿ.....

ಶ್ರೀ ಮಾಣಿಕರಾವ್ ಪಾಟೀಲ್.—ಅದು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವೇ ಡೀಲ್ ಮಾಡುತ್ತಿರುವುದರಿಂದ, ನೀವೇ ಮಂತ್ರಿಗಳು ಏನ್ನುವ ಕಲ್ಪನೆ ಇದೆ.

ಶ್ರೀ ಜಿ. ಕೆ. ತಕ್ಕೇದ್.—ಸ್ವಾಮಿ, ೬–೫೦ ಆಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೆಂಬಲ ಬೆಲೆ ಬಗ್ಗೆ ನಾನು ದೇವೇಗೌಡರು ಹೇಳಿದ್ದೆವು. ಏನಂ ಬೇಕಾದರೂ ಮಾಡಿಕೊಳ್ಳಿ. ರೈತನಿಗೆ ಸರಿಯಾದ ಬೆಂಬಲ ಬೆಲೆ ಕೊಡುವಂಥ ವ್ಯವಸ್ಥೆ ಮಾಡಿ, ರೈತನಿಂದ ಕೊಳ್ಳುವುದಕ್ಕೂ, ಗ್ರಾಹಕರಿಗೆ ಮಾಡುವುದಕ್ಕೂ ೨೦–೨೫ ಪರ್ಸೆಂಟಿಗಿಂತ ಜಾಸ್ತಿ ಅಂತರ ಇರಬಾರದು. ಇದರಿಂದ ರೈತರಿಗೂ ಅನುಕೂಲ ಮಾಡಿದಂತಾಗುತ್ತದೆ. ಗ್ರಾಹಕರಿಗೂ ಅನುಕೂಲ ಮಾಡಿದಂತಾಗುತ್ತದೆ. ಈ ವಿಷಯದಲ್ಲಿ ತಾವು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸಂತ್ತೇನೆ.

MR. DEPUTY SPEAKER.—Discussions concluded. Hon'ble Minister for food and civil suppiles will reply to the demands on Monday.

ANNOUNCEMENT

I have one more announcement to make. I have received a message from the Chairman Legislative Council.

It reads as follows ;—

As required under rule 218 of Rules of procedure and conduct of Business in the Legislative Council I forward herewith the motion concurred by the Legislative Council :

"That for the presentation of the report by the Joint Select Committee on Karnataka State Conduct of Examinations (Prevention of Unfair means) Bill, 1982 be further extended upto the last day of the current session."

Now the House stands adjourned to meet at 11-00 A.M. tomorrow.

The House adjourned at thirty five minutes past six of the clock to meet again at eleven of the clock on Saturday the 17th July 1982.